## ನಿಮ್ಮೊಡನೆ

# ಮಕ್ಕಳ ಕಾಳಜಿ- ಸಂರಕ್ಷಣೆಗೆ ಹಿನ್ನಡೆ

ಮಕ್ಕಳ ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ ನಮ್ಮಲ್ಲಿ ಎಷ್ಟರಮಟ್ಟಿಗೆ ಅನುಷ್ಠಾನಗೊಂಡಿದೆ ಹಾಗೂ ಬೀದಿ ಮಕ್ಕಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಇಳಿಮುಖ ಆಗುತ್ತಿಲ್ಲವೇಕೆ ಎನ್ನುವಂಥ ಪ್ರಶ್ನೆಗಳನ್ನು ಕೇಳಿಕೊಂಡರೆ, ಮಕ್ಕಳ ಬಗ್ಗೆ ಸರ್ಕಾರದ ನಿಜವಾದ ಕಾಳಜಿ ಎಷ್ಟರಮಟ್ಟಿಗೆ ಇದೆಯೆನ್ನುವುದು ಅರ್ಥವಾಗುತ್ತದೆ.

ಬಾಲಾಪರಾಧಿಗಳ ವಯಸ್ಸನ್ನು ಹದಿನೆಂಟರಿಂದ ಹದಿನಾರಕ್ಕೆ ಇಳಿಸುವ 'ಬಾಲ ನ್ಯಾಯ ಕಾಯ್ದೆ'ಯ ತಿದ್ದುಪಡಿಗೆ ಸಾರ್ವಜನಿಕ ವಲಯದಲ್ಲಿ ದೊಡ್ಡ ಮಟ್ಟದ ಸ್ವಾಗತ ವ್ಯಕ್ತವಾಗಿದೆ. ಮಕ್ಕಳಲ್ಲಿ ಅಪರಾಧ ಪ್ರವೃತ್ತಿಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಈ ತಿದ್ದುಪಡಿಯನ್ನು ಮಹತ್ವದ ಹೆಜ್ಜೆ ಎಂದು ಭಾವಿಸಲಾಗುತ್ತಿದೆ. ರಾಷ್ಟ್ರಪತಿಗಳ ಅಂಕಿತಕ್ಕೆ ಕಾಯುತ್ತಿರುವ ಹೊಸ ಮಸೂದೆಯ ಪ್ರಕಾರ ಬಾಲಾಪರಾಧಿಗಳ ವಯಸ್ಸು 16ಕ್ಕೆ ಇಳಿಯಲಿದೆ ಹಾಗೂ ಕೊಲೆ, ಅತ್ಯಾಚಾರದಂತಹ ಗಂಭೀರ ಅಪರಾಧದ ಪ್ರಕರಣಗಳಲ್ಲಿ ಜೈಲು ಶಿಕ್ಷೆಯನ್ನು 3ರಿಂದ 8 ವರ್ಷಗಳವರೆಗೆ ವಿಧಿಸಬಹುದಾಗಿದೆ. ಆದರೆ ಹೊಸ ಮಸೂದೆಯಲ್ಲೂ ಗಲ್ಲು ಶಿಕ್ಷೆಗೆ ಅವಕಾಶವಿಲ್ಲ. ಪ್ರತಿ ಜಿಲ್ಲೆಯಲ್ಲೂ ಬಾಲಾಪರಾಧಿಗಳ ನ್ಯಾಯಿಕ ಮಂಡಳಿ ಹಾಗೂ ಮಕ್ಕಳ ಕಲ್ಯಾಣ ಕೇಂದ್ರಗಳನ್ನು ಸ್ಥಾಪಿಸಲು ಮಸೂದೆ ಸೂಚಿಸಿದೆ.

ಮೂರು ವರ್ಷಗಳ ಹಿಂದೆ ದೆಹಲಿಯಲ್ಲಿ ಚಲಿಸುವ ಬಸ್ಸಿನಲ್ಲಿ ನಡೆದ ಹೆಣ್ಣುಮಗಳ ಮೇಲಿನ ಸಾಮೂಹಿಕ ಅತ್ಯಾಚಾರ ಹಾಗೂ ಕೊಲೆ ಪ್ರಕರಣದಲ್ಲಿ ಭಾಗಿಯಾಗಿದ್ದ ಬಾಲಾಪರಾಧಿಯ ವಿರುದ್ಧ ದೇಶದಾದ್ಯಂತ ಆಕ್ರೋಶ ವ್ಯಕ್ತವಾಗಿತ್ತು. ಮೂರು ವರ್ಷಗಳ ಶಿಕ್ಷೆಯ ನಂತರ ಆ ಬಾಲಾಪರಾಧಿ ಬಿಡುಗಡೆಯಾಗಿರುವುದು ಮಾಧ್ಯಮಗಳಲ್ಲಿ ಮತ್ತು ಸಾರ್ವಜನಿಕ ವಲಯದಲ್ಲಿ ದೊಡ್ಡ ಮಟ್ಟದ ಚರ್ಚೆಗೆ ಕಾರಣವಾಗಿತ್ತು. ಇದಕ್ಕೆ ಪ್ರತಿಕ್ರಿಯೆ ಎನ್ನುವಂತೆ 'ಬಾಲ ನ್ಯಾಯ ಕಾಯ್ದೆ'ಗೆ ತಿದ್ದುಪಡಿ ತಂದಿರುವ ಸರ್ಕಾರ, ಪರಿಷ್ಕೃತ ಮಸೂದೆಯನ್ನು ಸಂಸತ್ತಿನ ಮುಂದೆ ತರಾತುರಿಯಲ್ಲಿ ತಂದು ಎರಡೂ ಸದನಗಳ ಒಪ್ಪಿಗೆ ಪಡೆದಿದೆ. ಅಪರಾಧಗಳನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಸರ್ಕಾರದ ಕ್ರಮ ಸ್ವಾಗತಾರ್ಹವಾದರೂ, 'ಬಾಲ ನ್ಯಾಯ ಕಾಯ್ದೆ'ಯ ತಿದ್ದುಪಡಿಗೆ ಸಂಬಂಧಿಸಿದಂತೆ ಸರ್ಕಾರದ ನಡೆ ವಿವೇಚನೆಯಿಂದ ಕೂಡಿದೆ ಎಂದು ಹೇಳುವುದು ಕಷ್ಟ. ಮಹತ್ವದ ಕಾಯ್ದೆಯೊಂದಕ್ಕೆ ತಿದ್ದುಪಡಿ ತರುವುದಕ್ಕೆ ಪೂರ್ವಭಾವಿಯಾಗಿ ದೊಡ್ಡಮಟ್ಟದಲ್ಲಿ ಸಾರ್ವಜನಿಕ ಚರ್ಚೆಗಳನ್ನು ನಡೆಸುವುದು ಮತ್ತು ಅಭಿಪ್ರಾಯ ಸಂಗ್ರಹಿಸುವುದು ಅಗತ್ಯ. ಈ ಸಾವಧಾನವನ್ನು ತೋರದ ಸರ್ಕಾರ, ಸಮಾಜದ ಒಂದು ವಲಯದ ಆಕ್ರೋಶವನ್ನು ತಾನೂ ಆವಾಹಿಸಿಕೊಂಡಂತಿದೆ.

ಪ್ರಸ್ತುತ ಮಸೂದೆಯ ತಿದ್ದುಪಡಿಯ ಹಿನ್ನೆಲೆಯಲ್ಲಿ ಆಕ್ರೋಶ ಹಾಗೂ ಭಾವುಕತೆಯ ಪಾಲು ಹೆಚ್ಚಾಗಿರುವುದಲ್ಲದೆ, ಮಸೂದೆಯ ಮೂಲ ಆಶಯವಾದ ಮಕ್ಕಳ ಕಾಳಜಿ ಮತ್ತು ಸಂರಕ್ಷಣೆಗೆ ಇದು ವಿರುದ್ಧವೂ ಆಗಿದೆ. ಇದೊಂದು ರೀತಿಯಲ್ಲಿ ವ್ಯವಸ್ಥೆ ತನ್ನ ವೈಫಲ್ಯವನ್ನು ಮರೆಮಾಚುವ ಪ್ರಯತ್ನವೂ ಆಗಿದೆ. ಮಕ್ಕಳ ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ ನಮ್ಮಲ್ಲಿ ಎಷ್ಟರಮಟ್ಟಿಗೆ ಅನುಷ್ಠಾನಗೊಂಡಿದೆ ಹಾಗೂ ಬೀದಿ ಮಕ್ಕಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಇಳಿಮುಖ ಆಗುತ್ತಿಲ್ಲವೇಕೆ ಎನ್ನುವಂಥ ಪ್ರಶ್ನೆಗಳನ್ನು ಕೇಳಿಕೊಂಡರೆ, ಮಕ್ಕಳ ಬಗ್ಗೆ ಸರ್ಕಾರದ ನಿಜವಾದ ಕಾಳಜಿ ಎಷ್ಟರಮಟ್ಟಿಗೆ ಇದೆಯೆನ್ನುವುದು ಯಾರಿಗಾದರೂ ಅರ್ಥವಾಗುತ್ತದೆ. ದೇಶದ ನಾಲ್ಕನೇ ಒಂದು ಭಾಗದಷ್ಟು ಮಕ್ಕಳು ಅಪರಾಧದ ಪರಿಸರದಲ್ಲಿ ಬದುಕುತ್ತಿದ್ದಾರೆ. ಆ ಮಕ್ಕಳ ಬೆಳವಣಿಗೆಗೆ ಆರೋಗ್ಯಕರ ಪರಿಸರವೊಂದನ್ನು ಸೃಷ್ಟಿಸಲು ನಮಗೆ ಸಾಧ್ಯವಾಗಿಲ್ಲ. ಮಕ್ಕಳ ಬೆಳವಣಿಗೆಗೆ ಆರೋಗ್ಯಕರ ಪರಿಸರವನ್ನು ಸೃಷ್ಟಿಸಲಾಗದ ನಾವು, ಅವರು ತಪ್ಪು ಮಾಡಿದಾಗ ಶಿಕ್ಷಿಸಲು ಅತ್ಯುತ್ಸಾಹ ತೋರಿಸುತ್ತಿರುವ ವಿಪರ್ಯಾಸ ಇಲ್ಲಿನದು.

ಸುಧಾರಣಾ ಗೃಹಗಳಿಂದ ಹೊರಬರುವ ಮಕ್ಕಳಿಗೆ ಪುನರ್ವಸತಿ ಕಲ್ಪಿಸುವ ಸಮರ್ಪಕ ಯೋಜನೆಗಳೇ ನಮ್ಮಲ್ಲಿಲ್ಲ. ಬಾಲಾಪರಾಧಿಗಳ ವಯಸ್ಸನ್ನು 16ಕ್ಕೆ ಇಳಿಸುವುದರಿಂದ ಪ್ರತಿ ವರ್ಷ ಕನಿಷ್ಠ ಹತ್ತು ಸಾವಿರ ಮಕ್ಕಳು ಜೈಲು ಸೇರುವುದು ಖಚಿತ ಎನ್ನುವುದು ಒಂದು ಅಂದಾಜು. ಈಗಾಗಲೇ ದೊಡ್ಡಿಗಳಂತಾಗಿರುವ ಜೈಲುಗಳು ಹೆಚ್ಚಿನ ಬಾಲಾಪರಾಧಿಗಳಿಂದಾಗಿ ಮತ್ತಷ್ಟು ಗಿಜಿಗುಟ್ಟತೊಡಗುತ್ತವೆ. ಇಂಥ ಅನಾರೋಗ್ಯಕರ ಪರಿಸರದಲ್ಲಿ ಬಂಧಿಯಾಗುವ ಮಕ್ಕಳು ಶಿಕ್ಷೆಯ ನೆಪದಲ್ಲಿ ಇನ್ನಷ್ಟು ಕಠೋರ ಮನಸ್ಥಿತಿ ಹೊಂದಿದರೆ ಆಶ್ಚರ್ಯವೇನಿಲ್ಲ.

ಅಪರಾಧ ಮಾಡಿದ ಯಾರಾದರೂ ಶಿಕ್ಷೆ ಅನುಭವಿಸಬೇಕು ಎನ್ನುವುದರಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿಲ್ಲ. ಆದರೆ, ಕಠಿಣ ಕಾನೂನಿನ ಮೂಲಕ ಅಪರಾಧಗಳನ್ನು ನಿಯಂತ್ರಿಸಬಹುದು ಎನ್ನುವ ತರ್ಕ ಸರಿಯಾದುದಲ್ಲ. ಅಪರಾಧಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಕಾನೂನು ಒಂದು ಸಲಕರಣೆಯಷ್ಟೇ ಎನ್ನುವುದನ್ನು ಮರೆಯಬಾರದು. ಕಾಯ್ದೆಯೊಂದರ ತಿದ್ದುಪಡಿ ಅದರ ಮೂಲ ಆಶಯಗಳನ್ನು ವಿರೂಪಗೊಳಿಸಬಾರದು. ಪ್ರಸಕ್ತ 'ಬಾಲ ನ್ಯಾಯ ಕಾಯ್ದೆ'ಯ ತಿದ್ದುಪಡಿಗಳು ಮಕ್ಕಳ ಕಾಳಜಿ ಮತ್ತು ಸಂರಕ್ಷಣೆ ಎನ್ನುವ ಮಸೂದೆಯ ಮೂಲ ಪ್ರೇರಣೆಗಳನ್ನೇ ತೆಳುವಾಗಿಸುವ ಪ್ರಯತ್ನಗಳಾಗಿವೆ. ಆರೋಗ್ಯಕರ ಸಮಾಜದ ಹಂಬಲವುಳ್ಳವರು ಒತ್ತು ನೀಡಬೇಕಾದುದು ಶಿಕ್ಷಣಕ್ಕೇ ಹೊರತು ಶಿಕ್ಷೆಗಲ್ಲ.

■ ರಘುನಾಥ ಚ.ಹ.



ಶಿಲ್ಪಾ